# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 54 ಪ್ರಾ.ಸಾ. : 42**

| | | |
|---|---|---|
| ಸಾಕ್ಷಿಯ ಹೆಸರು | : | ಇರ್ಫಾನ್ ಎಂ. ಮತ್ತೆಖಾನ |
| ತಂದೆಯ ಹೆಸರು | : | ಮೆಹಬೂಬ್ ಅಲಿ ಮತ್ತೆಖಾನ್ |
| ವಯಸ್ಸು | : | 38 ವರ್ಷ |
| ಕೆಲಸ | : | ಪೊಲೀಸ್ ಪೇದೆ, ಹಾವೇರಿ ನಗರ ಪೊಲೀಸ್ ಠಾಣೆ |
| ವಾಸ | : | ಹಾವೇರಿ |

**ದಿನಾಂಕಃ 17-02-2026 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಸೆಪ್ಟೆಂಬರ್ 2009 ರಿಂದ ಜುಲೈ 2016 ರವರೆಗೆ ನಾನು ಕದ್ರಾ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ-53 ಶ್ರೀ ಗೋವಿಂದ ರಾಜು ರವರೂ ಸಹ ನನ್ನೊಂದಿಗೆ ಕರ್ತವ್ಯ ನಿರ್ವಹಿಸುತ್ತಿದ್ದರು. ಆದರೆ ಅವರು ಈಗ ತೀರಿಕೊಂಡಿರುತ್ತಾರೆ.

2. ದಿ.15-02-2014 ರಂದು ಮಧ್ಯರಾತ್ರಿ ಸುಮಾರು 2.30 ಗಂಟೆಗೆ ಚಾಸಾ-56 ರವರು ಈ ಪ್ರಕರಣದ ಪ್ರ.ವ.ವರದಿ ಹಾಗೂ ದೂರನ್ನು ಮಾನ್ಯ ನ್ಯಾಯಾಲಯಕ್ಕೆ ತಲುಪಿಸುವಂತೆ ಸೂಚಿಸಿರುತ್ತಾರೆ. ಆದರೆ, ಆ ದಿನ ರಾತ್ರಿ ಕಾರವಾರಕ್ಕೆ ಬರಲು ಬಸ್ಸಿನ ಸೌಕರ್ಯ ಇರಲಿಲ್ಲ. ಮರುದಿನ ಬೆಳಿಗ್ಗೆ ನನಗೆ ಆರೋಗ್ಯ ಸರಿಯಿಲ್ಲದ ಕಾರಣ, ಔಷಧಿ ಸೇವಿಸಿ, ಸ್ವಲ್ಪ ವಿಶ್ರಾಂತಿ ಮಾಡಿಕೊಂಡು ನಂತರ ಮಧ್ಯಾಹ್ನ ಸುಮಾರು 1.40 ಗಂಟೆಗೆ ಮಾನ್ಯ ನ್ಯಾಯಾಲಯಕ್ಕೆಪ್ರಥಮ ವರ್ತಮಾನ ವರದಿಯನ್ನು ತಲುಪಿಸಿರುತ್ತೇನೆ.

3. ಆನಂತರ ದಿ.25-03-2014 ರಂದು ತನಿಖಾಧಿಕಾರಿಯಾದ ಚಾಸಾ-57 ರವರು ನನಗೆ ಮತ್ತು ಚಾಸಾ-53 ರವರಿಗೆ ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ 27 ಸೀಲಾದ ವಸ್ತುಗಳನ್ನು, ಕೋರಿಕೆ ಪತ್ರದೊಂದಿಗೆ ಡಿವೈ.ಎಸ್.ಪಿ. ಕಚೇರಿಯಿಂದ ಪಡೆದುಕೊಂಡು,

ಮಂಗಳೂರಿನ ಆರ್.ಎಫ್.ಎಸ್.ಎಲ್. ಗೆ ತಲುಪಿಸುವಂತೆ ಮೌಖಿಕವಾಗಿ ಸೂಚಿಸಿರುತ್ತಾರೆ. ಸದರಿ ವಸ್ತುಗಳನ್ನು ಪಡೆದುಕೊಂಡ ನಂತರ ನಾನು ಮತ್ತು ಚಾಸಾ-53 ರವರು ರಹದಾರಿಯೊಂದಿಗೆ ಮಂಗಳೂರಿಗೆ ಹೋಗಿ, ಆರ್.ಎಫ್.ಎಸ್.ಎಲ್. ಗೆ ಸದರಿ ವಸ್ತುಗಳನ್ನು ತಲುಪಿಸಿ, ಸ್ವೀಕೃತಿ ಪಡೆದುಕೊಂಡು ಬಂದು, ಅದೇ ದಿನ ರಾತ್ರಿ ಸದರಿ ಸ್ವೀಕೃತಿಯನ್ನು ಹೇಳಿಕೆ ಮತ್ತು ವರದಿಯೊಂದಿಗೆ ತನಿಖಾಧಿಕಾರಿಗೆ ನೀಡಿರುತ್ತೇನೆ. ಸದರಿ ವಸ್ತುಗಳು ಚಾಸಾ-53 ರವರ ಹೆಸರಿನಲ್ಲಿ ಸ್ವೀಕೃತಿಗೊಂಡಿರುತ್ತವೆ. ಸಾಕ್ಷಿಯು ಆರ್.ಎಫ್.ಎಸ್.ಎಲ್. ನಿಂದ ತಂದ ಸ್ವೀಕೃತಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-97 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ-**

4. ಪ್ರಥಮ ವರ್ತಮಾನ ವರದಿ ಹಾಗೂ ದೂರನ್ನು ತಲುಪಿಸಲು ವಿಳಂಬವಾದ ಬಗ್ಗೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಕಾರಣವನ್ನು ಬೇರೆ ಎಲ್ಲಿಯೂ ಹೇಳಿರುವುದಿಲ್ಲ ಎಂದರೆ ಸರಿ. ಇಲಾಖಾ ವಾಹನವನ್ನು ಬಳಸಲು ನಮಗೆ ಅನುಮತಿ ಇರುವುದಿಲ್ಲ. ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ಮೇಲಾಧಿಕಾರಿಗಳು ಸೃಷ್ಟಿಸಿದ ದಾಖಲೆಗಳಾದ ಕಾರಣ, ಅವುಗಳನ್ನು ತಲುಪಿಸಲು ವಿಳಂಬವಾಗಿದೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಕಾರಣವು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುಗಳನ್ನು ಆರ್.ಎಫ್.ಎಸ್.ಎಲ್. ಗೆ ತೆಗೆದುಕೊಂಡು ಹೋಗಿಲ್ಲ ಹಾಗೂ ಯಾವುದೇ ಸ್ವೀಕೃತಿ ಪತ್ರವನ್ನು ಪಡೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**ಮರುವಿಚಾರಣೆ – ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ